ಶ್ರೀ ರಂಗನಾಥ ಗ್ರಂಥಮಾಲಾ   ದ್ವಿತೀಯ ಪುಷ್ಪ.

ಶ್ರೀ

ಜಯಚಾಮರಾಜ ಶತಕಂ

ಗುರುದೇವಾರಾಧ್ಯ
ಮಾದನಹಳ್ಳಿ, ಮಠ.

1941

ಬೆಲೆ: ೦—೨—೬.

ದ್ವಿತೀಯ ಪುಷ್ಪ.

ಶ್ರೀ

[illegible]

ಗುರುದೇವಾರಾಧ್ಯ

[illegible]

[illegible]

1941



ನಮ್ಮ ಪರಿಪಾಲಕರೂ, ಕರ್ನಾಟಕ ರತ್ನಸಿಂಹಾಸನಾಧೀಶರೂ ಆಗಿ
ವಿರಾಜಿಸುತ್ತಿರುವ

ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದೂರ್
ಮಹಾಸ್ವಾಮಿಯವರು.

—: ವಿಜ್ಞಪ್ತಿ :—

ನಮ್ಮನ್ನಾಳುವ ಮಹಾಪ್ರಭುಗಳವರ ಕೃಪಾಕಟಾಕ್ಷ ವೀಕ್ಷಣದ ಫಲವಾಗಿ ಈ ಹಿಂದೆ 'ಶ್ರೀಮನ್ನಾಲ್ಮಡಿ ಕೃಷ್ಣರಾಜಾಭ್ಯುದಯ ಚರಿತಂ' ಎಂಬ ಹೆಸರಿನಿಂದ ನಾನು ಅವರ ಜೀವನ ಚರಿತ್ರೆಯನ್ನು ಛಾಪಿಸಿ ಷಟ್ಪದಿ ರೂಪಕದಲ್ಲಿ ರಚಿಸಿದ್ದಾಯಿತು. ಆ ಕಾಲದಿಂದಲೂ ಪ್ರಭುವಂತದಲ್ಲಿ ನೀತಿ ಬೋಧಕವಾದ ಸಂಕ್ಷಿಪ್ತ ಗ್ರಂಥವೊಂದನ್ನು ರಚಿಸಬೇಕೆಂದು ಇದ್ದ ನನ್ನ ಹಂಬಲವು ಈ ನಾಟಕ ರೂಪದಲ್ಲಿ ಹೊರಬಿದ್ದು ತಮ್ಮ ಕರಕಮಲಗಳಿಗರ್ಪಿತವಾಗಿರುವುದು.

ಈ ಗ್ರಂಥದಿಂದ ವಾಚಕರಿಗೆ ಅತ್ಯಲ್ಪ ಫಲವಾದರೂ, ಅದು ನಮ್ಮನ್ನಾಳುವ ಮಹಾಪ್ರಭುಗಳವರ ಕೃಪಾಬಲವೆಂದೇ ನನ್ನ ಪರಮ ಭಾವನೆ, ಮತ್ತು ಇದರ ಕಾರ್ಯವು ಸುಗಮವಾಗಿ ನಡೆಯಲು ಕೃಪೆಯಿಟ್ಟ ಆ ನನ್ನ ಮೂಲಸ್ವಾಮಿಯಾದ ಶ್ರೀ ಸಂಗಮನಾಥನಿಗೆ ನಿತ್ಯವೂ ಎಡೆಬಿಡದೆ ನನ್ನ ಅನಂತಾನಂತ ಪ್ರಣಾಮಗಳನ್ನು ಅರ್ಪಿಸದಿರಲಾರೆನು.

ಇತಿ ವಿದ್ವಜ್ಜನ ವಿಧೇಯ,

ಮಾದನಹಳ್ಳಿ ಮಠ
20-3-41

ಗುರುದೇವಾರಾಧ್ಯ,
ಮಾದನಹಳ್ಳಿ ಮಠ.



ಶ್ರೀ [illegible]

ಶ್ರೀ ಜಯಚಾಮರಾಜ ಶತಕಂ

[illegible]
[illegible]
[illegible]
[illegible]
[illegible]
[illegible] 1

[illegible]
[illegible]
[illegible]
[illegible]
[illegible]
[illegible] ಸಲಹು ಶ್ರೀ ಜಯಚಾಮರಾಜೇಂದ್ರ 2

[illegible]
[illegible]
[illegible]
[illegible]
[illegible]
ನರರೆ [illegible] ಸಲಹು ಶ್ರೀ ಜಯಚಾಮರಾಜೇಂದ್ರ 3

ಹರನ ಮೇಣ್ ನರಪತಿಯು ಗಣಿಸಲು
ಪರನದಸದೃಶದೈವ ಸಂತತ
ನರಪತಿಯು ಸಾಧ್ಯಪ್ರದೈವವುಮುಪಾಸಿಂ ಜಗದಿ ॥
ನರಪನರ್ಚನೆ ಭಕ್ತಿಭಾವವು
ಹರನಪೂಜಾಭಕುತಿಗಿಮ್ಮಡಿ
ಸಿರುತ ಸತ್ಯಂ ಸಲಹು ಶ್ರೀ ಜಯಚಾಮರಾಜೇಂದ್ರ ॥ ೫ ॥

ನೃಪತಿಯೇ ಪ್ರತ್ಯಕ್ಷ ದೈವಂ
ಸುಪವಿತನು ವ್ಯಸನಾದಿರಹಿತಂ
ವಿಪುಲನಿರ್ಮಲ ಸತ್ಯಚರಿತಂ ಪಡರಿಸಿಸ್ಸೀಮಂ ॥
ಕಪಟ ಕಲಿಮರ್ದನನು ಶಂಕರ
ಜಪತಪಾನ್ವಿತನೆಂದು ವೇದಂ
ಸುಪಥದುಲಿಗುಂ ಸಲಹು ಶ್ರೀ ಜಯಚಾಮರಾಜೇಂದ್ರ ॥ ೬ ॥

ರಾಜ ತಾ ಭುವಿಪ್ರವಮೆನ್ನುತ
ಈಜಗದೆ ಜನ ಪೊಗಳೆ ಮರಳಿಯು
ರಾಜನೇಂ ನರ ಸಟೆಯೆ ? ಯೆನ್ನುವ ಮೂರ್ಖವರ್ಗಂಗೆ ॥
ಮೂಜಗದೆ ಬಹುಕೇಡು ಬಪ್ಪುದು
ಸೋಜಿಗವೆ ಪರಿಕಿಸಲು ಸಂತತ
ರಾಜ ದೈವವು ಸಲಹು ಶ್ರೀ ಜಯಚಾಮರಾಜೇಂದ್ರ ॥ ೭ ॥

ಜಗವ ರಕ್ಷಿಸೆ ದೈವ ತಾ ಬಗೆ
ಬಗೆಯ ರೂಪನೆ ಧರಿಸಿ ಲೋಕದೊ
ಳೊಗೆವ ನರಪತಿ ಪೆಸರನಾಂತಿಹಲೋಕಜನತತಿಯ ॥
ಸಗುಣ ನಿರ್ಗುಣ ಬಲದಿ ರಕ್ಷಿಪ
ನಿಗಮವೇದ್ಯನೆ ರಾಜನಿದನುರು
ಬಗೆಯೆ ಸತ್ಯಂ ಸಲಹು ಶ್ರೀ ಜಯಚಾಮರಾಜೇಂದ್ರ ॥ ॥ ೮ ॥

ವೇದಶಾಸ್ತ್ರ ಪುರಾಣ ತರ್ಕವ
ಹಾದಿಯನು ನಾವರಿದೆವಾದೊಡೆ
ಮೇದಿನೀಪತಿ ವಿಷ್ಣುವೈ ಗಣಿಸಲ್ಕೆ ಯೆಂದೆನುತ ||
ಮೋದದಿಂದವೃಮುಲಿಗು ಲೋಕದೊ
ಳಾದಿ ದೈವಂ ಬೇರೆಯುಂಟೆ ಯು
ನಾದಿ ಮುಕ್ತನೆ ಸಲಹು ಶ್ರೀ ಜಯಚಾಮರಾಜೇಂದ್ರ || ೮ ||

ಮುಂದೆ ಸ್ತೋತ್ರವ ಗೈಯುತ ಸುಬಲ
ದಿಂದೆ ನಿನ್ನನು ಹಲವು ಪರಿಯೊಳು
ನಿಂದೆ ಗೈಯುವ ಮಾನವರ್ಗಿಹಪರದೊಳತಿಪಾಪಂ ||
ಬಂದು ರೌರವ ನರಕದಲಿ ಬಹು
ಚಂದದಿಂ ಪೊರಳದೆಲೆಯಿಹರೆ ಯು
ನಂದಮತಿ ನೀ ಸಲಹು ಶ್ರೀ ಜಯಚಾಮರಾಜೇಂದ್ರ || ೯ ||

ಉರಗೆ ಮರುತನಂ ಬೆದರುವುದೆ ಮದ
ಕರಿಗೆ ಸಿಂಹವು ಬೆದರುವುದೆ ನೃಪ
ವರರು ನರರಿಗೆ ಗುರುವು ಶಿಷ್ಯರಿಗಂಜುವರೆ ಗಣಿಸೆ ||
ಮರುಳು ಮೂರ್ಖತೆ ತ್ಯಜಿಸಿ ನಾವತಿ
ಹರುಷದಿಂ ಪ್ರಭುಪದವ ಪಿಡಿಯಲು
ಪರಿತಪಳಗಂ ಸಲಹು ಶ್ರೀ ಜಯಚಾಮರಾಜೇಂದ್ರ || ೧೦ ||

ಮಣ್ಣು ಕುಡಿಕೆಯ ನೆಚ್ಚಿ ನದಿಯನು
ಮುನ್ನ ದಾಂಟಲು ಪೋಪವನ ಪೊಲು
ಬನ್ನಗೊಳಿಸಾ ಬುದ್ಧಿಗಲಿತತಿ ಹೆಮ್ಮೆಗೊಳ್ಳುತಲಿ ||
ಹಣ್ಣಿ ಕೆಡುತಿಹುದುಚಿತವೇ ಸಂ
ಪನ್ನ ಭೂಪತಿ ಪದವ ಪಿಡಿವಡೆ
ಯಿನ್ನು ದುಃಖಮೆ ಸಲಹು ಶ್ರೀ ಜಯಚಾಮರಾಜೇಂದ್ರ || ೧೧ ||

ಅರಗಿನಾ ಬಲದಿಂದೆ ಧೈರ್ಯದಿ
ಉರಿಯ ಗೆಲ್ಲುವ ತೆರದೊಳೆಮ್ಮಯ
ಹುರುಳದಿಲ್ಲದ ಬುದ್ಧಿಯಿಂ ಬಲು ಚೋದ್ಯಗೊಳ್ಳುತಲಿ ||
ನರಪನೊಳು ಕದನವನು ಗೈಯುತ
ಮರುಳರೆನಿಪುದು ಸರಿಯೆ ಸದ್ಗುಣ
ದಿರವೆ ಲೇಸೈ ಸಲಹು ಶ್ರೀ ಜಯಚಾಮರಾಜೇಂದ್ರ || ೧೨ ||

ಸಸಿಯ ಸೀತಲ ನಿಶಿಯಲಲ್ಲದೆ
ಬಿಸಿಗದಿರನಾ ಮುಂದೆ ನಡೆವುದೆ
ಮಸೆವುದೆ ಧರಣಿಪತಿಯಿದಿರೊಳು ಜನತೆ ಕುಟಿಲತನಂ ||
ನಶಿಸದುಳಿಯದು ನಮ್ಮ ಭಾಗ್ಯವು
ಮುಸುಳುಗೊಳೆ ನೃಪನೊಡನೆ ಸಂತತ
ಹುಸಿಯಿದಲ್ಲವು ಸಲಹು ಶ್ರೀ ಜಯಚಾಮರಾಜೇಂದ್ರ || ೧೩ ||

ಒಲೆಗಳುರಿದೊಡೆ ರಭಸದಿಂದಲಿ
ನಿಲಲಹುದು ಬಿಡದೊಂದು ತಾವಿನೊಳ್
ನೆಲನುರಿಯೆ ಜಗದೊಳಗೆ ಬದುಕುವ ವೀರನಾರೈಯ್ಯ ||
ಅಲಘುಬಲನೆನಿಸಿರ್ಪ ನಿನ್ನಯ
ಒಲವು ಬಲಗಳು ತಪ್ಪಿ ಪೋದೊಡೆ
ಬಲಿಯದಲ್ಲವೆ? ಸಲಹು ಶ್ರೀ ಜಯಚಾಮರಾಜೇಂದ್ರ || ೧೪ ||

ಮರುಳರಜ್ಞತೆಯಿಂದಲೆಸಗಿದ
ದುರಿತ ಕೃತ್ಯಕೆ ನೃಪತಿ ನಿಮ್ಮಯ
ಕರುಣಪದದೊಳು ಕ್ಷಮೆಯನೀವುದು ಮುಕುತಿವೆರಸುತಲಿ ||
ಬರಿಯ ಮಾತನು ಪೇಳಿ ಫಲವೇ
ಸರಿಯೆದವರೊಳು ಕರುಣ ತೋರ್ಪುದು
ಧರಪಣಿತಿಮತ ಸಲಹು ಶ್ರೀ ಜಯಚಾಮರಾಜೇಂದ್ರ || ೧೫ ||

ಭಕ್ತಿಯೆ ವರಚಿತ್ತಶುದ್ಧಿ ವಿ
ರಕ್ತಿಯುರುತರ ಮೋಹಬಂಧನ
ಮುಕ್ತಿಯೆ ತನುಲೋಭಬಿಡುಗಡೆ ಜಗದೆ ಪರಿಕಿಸಲು ||
ಶಕ್ತಿಯೆ ಪರಹಿತವು ಸಂತತ
ಯುಕ್ತಿಯೆ ಚಾತುರ್ಯ ಸುಗುಣಾ
ಸಕ್ತ ಕೃಪೆಯಿಂ ಸಲಹು ಶ್ರೀ ಜಯಚಾಮರಾಜೇಂದ್ರ || ೧೬ ||

ಪಾಪವೇ ಪರಸಿಂಪೆ ಜಗದೊಳು
ತಾಪವೇ ಘನಚಿಂತೆ ನರಕದ
ಕೂಪವೇ ದಾರಿದ್ರ್ಯ ಶಾಪಕೆ ನಿರ್ಭಯವೆ ಕುರುಹು ||
ರೂಪವೇ ಕ್ಷಮೆದಮೆಯು ಕರ್ಕಶ
ಕೋಪವೆ ಕಡುಹಮ್ಮು ಪರಿಕಿಸೆ
ಸೋಪಹಾಸದಿ ಸಲಹು ಶ್ರೀ ಜಯಚಾಮರಾಜೇಂದ್ರ || ೧೭ ||

ಆಸೆಯೇ ರೌರವದ ಗುಂಡಿ ನಿ
ರಾಶೆಯೇ ಕಡುಮುಕುತಿ ಯುಕ್ತವು
ರೋಷವೆ ಮನುಜರ್ಗೆ ದೋಷದ ಪುಂಜ ಸಂತತವು ||
ದೇಶದೊಳಗತಿ ಪರಹಿತವು ಕೈ
ಲಾಸವಾಸವು ತಪಕಿಸಲು ಕ್ಷೋ
ಣೀಶ ಕೃಪೆಯಿಂ ಸಲಹು ಶ್ರೀ ಜಯಚಾಮರಾಜೇಂದ್ರ || ೧೮ ||

ಸಿರಿಯು ಬರ್ಪುದುದಾರ ತನದಿಂ
ದರಿಯೆ ಬಡತನಕಿನ್ನು ಲೋಭವು
ಪರಮ ಮೈತ್ರೀಭಾವದಿರುತಿಹುದೀ ಧರಿತ್ರಿಯೊಳು ||
ಪರಿಕಿಸಲು ಪರಹಿತವು ಸೌಖ್ಯವು
ಪರರ ಪೀಡನೆ ಪಿರಿದು ದುಃಖವು
ಸಿರುತ ಸದ್ಗುಣಿ ಸಲಹು ಶ್ರೀ ಜಯಚಾಮರಾಜೇಂದ್ರ || ೧೯ ||

ಆವ ಗುಣಗಳಿಗಿನ್ನು ಲೋಕದೊ
ಳಾವ ಗುಣವೇ ಲೇಸದಲ್ಲದೆ
ದೇವಗಣಗಳಿಗೀಯುವುದು ಕಡುಲೇಸು ಪರಿಕಿಸಲು ||
ಜೀವದಿಹ ಸಚರಾಚರಂಗಳು
ದೇವನಿಕರಕೆ ಸಾಟಿ ಮಹಿಸುರ
ಜೀವ ಕರುಣದಿ ಸಲಹು ಶ್ರೀ ಜಯಚಾಮರಾಜೇಂದ್ರ || ೩೦ ||

ಒಡವೆ ನಾಣ್ಯವು ನೃಪರಿಗೆ ಮೋ
ಣ್ಮಡದಿಯರು ಕಾಮಾತುರಂಗುರು
ಪೊಡವಿಸತ್ವವು ಭೂಮಿಪರಿಗಿದು ನೇಮಧರ್ಮಗಳು ||
ಕಡುಕರುಣಿಗತಿ ಧರ್ಮ ಮಾರ್ಗವು
ದೃಢವು ಜ್ಞಾನವು ಸತ್ವನಿಗೆ ಕೈ
ಬಿಡದೆ ಮಹಿಸುರ ಸಲಹು ಶ್ರೀ ಜಯಚಾಮರಾಜೇಂದ್ರ || ೩೧ ||

ಉತ್ತಮವು ಗೋದಾನ ಲೋಕದೊ
ಳುತ್ತಮವು ಭೂದಾನವದರೊಳ್
ಗುತ್ತಮವು ಅಶನವನ್ನೀಯುವುದು ಹಸಿದ ಕಾಲದೊಳು ||
ಉತ್ತಮವು ನಿಜಕನ್ಯೆ ದಾನವ
ದುತ್ತಮವು ದಾಹವನು ಯಿಂಗಿಪು
ಮತ್ತಮೋತ್ತಮ ಸಲಹು ಶ್ರೀ ಜಯಚಾಮರಾಜೇಂದ್ರ || ೩೨ ||

ವ್ಯರ್ಥವೈ ಮತಿರಹಿತ ವಿದ್ಯೆಯು
ವ್ಯರ್ಥವೈ ಕಡುಲೋಭಿ ಜನುಮವು
ವ್ಯರ್ಥವೈ ದೈವತುತಿಯಿಲ್ಲದ ಕಾರ್ಯವಿರುವಿಕೆಯು ||
ವ್ಯರ್ಥವೈ ಅಪಕಾರ ಕೃತ್ಯವು
ವ್ಯರ್ಥವೈ ಕಾಠಿಣ್ಯ ಮನ ಸಾ
ಮರ್ಥ್ಯ ಸಂಪದ ಸಲಹು ಶ್ರೀ ಜಯಚಾಮರಾಜೇಂದ್ರ || ೩೩ ||

ಕುಡದನರ ದೂಷಿಪರು ಜಗದೊಳು
ಕೊಡುವವರ ಪೊಗಳುವರು ಸಂತತ
ಕೊಡೆ ಬಿಡಲು ಸುಜ್ಞಾನವೀಕ್ಷಣೆಯೊಳಿತು ಪರಿಕಿಸಲು ॥
ಬಡವರಿಂಗತಿ ಸುಜನನಿಕರಕೆ
ಕುಡುತೆ ಸಂತಸ ಸೌಖ್ಯ ತೃಪ್ತಿಯ
ಪಡಿಪ ವೀರನೆ ಸಲಹು ಶ್ರೀ ಜಯಚಾಮರಾಜೇಂದ್ರ ॥ ೨೪ ॥

ತರಣಿಯುಸಿಯದ ಗಗನ ವಿಲಸಿತ
ಕರುಣಮಿಲ್ಲದ ಸುಡಿಯು ಶಶಧರ
ಮೆರೆಯುದಿಹ ತನು ರಂಜಿಪುದೆ ಈ ಧರೆಯೊಳೊಲವಿಂದೆ ॥
ಹರಣವುಳ್ಳನಕಶನವು ಮೇಣ್
ಸಿರಿ ನೆಲೆಗೆ ಸದ್ಗುಣವೆ ಹಿತಕರ
ದುರಿತದೂರನೆ ಸಲಹು ಶ್ರೀ ಜಯಚಾಮರಾಜೇಂದ್ರ ॥ ೨೫ ॥

ಹೊನ್ನದಿಲ್ಲದ ಸಿರಿಯು ಸುರುಚಿರ
ಪಿರ್ನ್ನಮಿಲ್ಲದ ಪಟಿಕ ಭಕುತಿಯು
ನನ್ನಿಯಿಲ್ಲದ ತಪವು ವಿಫಲವದೀ ಧರಿತ್ರಿಯೊಳು ॥
ಕನ್ನೆಯುರವಿಲ್ಲದಿಹ ಭೋಗಗ
ಅನ್ನವಿಲ್ಲದ ದೇಹ ಕಿಡುಗುಂ
ಸನ್ನುತೇಂದಿರ ಸಲಹು ಶ್ರೀ ಜಯಚಾಮರಾಜೇಂದ್ರ ॥ ೨೬ ॥

ಕೊಡರು ಕೃತಯುಗದೊಳಗೆ ದಾನವ
ಕೊಡಲು ಕೊಂಬರು ತ್ರೇತೆಯೊಳಗಡೆ
ವಿಡದೆ ಬೇಡಲು ಕೊಡುತಲಿರ್ದರು ದ್ವಾಪರಾಯುಗಡೆ ॥
ಕಡುದರಿದ್ರಗೆ ಕಲಿಯುಗದಿ ಕೊಡೆ
ದೃಢತಮದ ಸೇವೆಯುಮದಲ್ಲದೆ
ಕೊಡರು ಕಷ್ಟಂ ಸಲಹು ಶ್ರೀ ಜಯಚಾಮರಾಜೇಂದ್ರ ॥ ೨೭ ॥

ಪೆಣ್ಣಿಸಿಂ ಸಲೆ ಕಷ್ಟಸುಖಗಳು
ಪೆಣ್ಣಿನಿಂದಲಿ ನರಕ ಸಗ್ಗವು
ಪೆಣ್ಣು ಮಾತೆಯು ಯೆನಿಸಿ ಪುತ್ರಿಯು ಪೆಣ್ತಿಯಾಗಿಹುದು ||
ಪೆಣ್ಣು ಕಾರಣ ಲೋಕ ಬೆಳೆವಡೆ
ಪೆಣ್ಣ ನಿಂದಿಪುದುಚಿತಮೇ ? ವರ
ಪುಣ್ಯಮೂರುತಿ ಸಲಹು ಶ್ರೀ ಜಯಚಾಮರಾಜೇಂದ್ರ || ೧೮ ||

ರವಿಯೊಳಗೆ ತೇಜವನು ಸರುಚಿರ
ಹವಿಯೊಳುಷ್ಣವ ಸಕಲ ಜನನುತ
ಭುವನಸತಿಯೊಳು ಸ್ಥೈರಣೆಯನವಲೋಕಿಪುದು ಹಿತನೆ ||
ಶಿವಶಿವಾ! ಗಹನದಿಂ ಪರಿಕಿಸೆ
ಭುವಿಯೊಡೆಯ ನಿನಗೆಣೆಯದಿಹರೆ ?
ಪ್ರವಿಮಲಾತ್ಮನೆ ಸಲಹು ಶ್ರೀ ಜಯಚಾಮರಾಜೇಂದ್ರ || ೧೯ ||

ಕಷ್ಟವು ದಾರಿದ್ರ್ಯ ಪ್ರಾಯದೆ
ಕಷ್ಟವು ಮೂರ್ಖತೆಯು ಜನತೆಗೆ
ಕಷ್ಟವು ಸಂಪದದೆ ಲೋಭತೆ ಋಣವು ಸದ್ಗುಣಿಗೆ ||
ಕಷ್ಟವು ಮಡೆಯುತನ ಬಾಳ್ವಗೆ
ಕಷ್ಟವು ಯತಿಗಾಸೆ ಲೋಕಕೆ
ಕಷ್ಟವು ನೆರೆ ಸಲಹು ಶ್ರೀ ಜಯಚಾಮರಾಜೇಂದ್ರ || ೨೦ ||

ಬಡತನದೆ ಶೂರರತಿ ಸುಜನರ
ಬಡತನದೆ ನವಕೋಮಲಾಂಗರ
ಬಡತನದೆ ವರ ಪಂಡಿತಾದ್ಯರ ರೂಪವಳಿಯುವುದು ||
ಬಡತನದೆ ಬಳಲಿದರನೇಕರು
ಬಡತನದೆ ನೋಯ್ವವರ ನೀ ಕೈ
ಪಿಡದೆ ಸಂತತ ಸಲಹು ಶ್ರೀ ಜಯಚಾಮರಾಜೇಂದ್ರ || ೨೧ ||

ಹರನು ದಹಿಸಿದ ಮನುಮಥನ ಪುರ
ಹರನು ದಹಿಸಿದನಸುರ ಭಸ್ಮನ
ಸುರರು ತ್ರಿಪುರವ ದಹಿಸಿದರು ಲೀಲಾ ವಿನೋದದಲಿ ||
ಧರೆಯ ದಾರಿದ್ರ್ಯವನು ದಹಿಸಲು
ಧರಣಿಪತಿ ನೀನೋರ್ವನಲ್ಲವೆ
ಇರರು ಲೋಕದಿ ಸಲಹು ಶ್ರೀ ಜಯಚಾಮರಾಜೇಂದ್ರ || ೩೨ ||

ನೆಲದೊಳಗೆ ಬಡವನನು ಕಂಡೊಡೆ
ಬಲುವಿನಿಂ ಹಿಂಸಿಸರು ಕೆಲಜನ
ಕುಲವೆ ಕೂಡರು ಕರ್ಮಿ ಪಾಪಿ ವಿಘಾತಕಿಯು ಯೆನುತೆ ||
ಅಲೆಗಳಿದು ಬೀಗುತ್ತಲಂತ್ಯಕೆ
ಹೊಲೆಯನೆನಲುಂ ಮರೆಯರಿದ ಪರಿ
ಹರಿಸಿ ಸಂತತ ಸಲಹು ಶ್ರೀ ಜಯಚಾಮರಾಜೇಂದ್ರ || ೩೩ ||

ಸುಧೆಯ ಸವಿಯನು ಬಕನು ಮೇಣಾ
ಮಧುರುಚಿಯ ಕಾಕದ್ವಯಂಗಳು
ಮುದದಿ ಬಲ್ಲವೆ ರೋಗಿ ವೈದ್ಯನದಿರವನರಿದಿಹನೆ ||
ಅಧಮರೊಳು ಪರಮ ನೃಪ ಭಕುತಿಯು
ಕದಲದುಳಿವುದೆ? ಸತತ ಭೂಪತಿ
ಪದುಳದಿಂ ನೀ ಸಲಹು ಶ್ರೀ ಜಯಚಾಮರಾಜೇಂದ್ರ || ೩೪ ||

ದೇವಗಜಕೆಯೆ ಸಮವೆ ವನಗಜ
ದೇವಮೃಗಕೆ ಯೆಣೆಯೆ ಜಂಬುಕ
ದೇವವಿತತಿಗೆ ಸರಿಯೆ ನರತತಿ ಸಂಕಿಸಲು ಮನದೆ ||
ಭಾವಿಸಲು ನಿನ್ನತುಲ ಶಕುತಿಗೆ
ಗಾವಿಲರು ಸರಿಯಹರೆ ಯದುಕುಲ
ಪಾವನಾ ನೀ ಸಲಹು ಶ್ರೀ ಜಯಚಾಮರಾಜೇಂದ್ರ || ೩೫ ||

ಜಗದಿ ಪಸರಿಪ ತಮುವನಡಗಿಸೆ
ಗಗನಮಣಿಯೊ ಶಕುತನಲ್ಲದೆ
ಯೊಗೆವ ತಾರಕೆ ಮಿಂಚುಬುಳುವಿಂದಸವೆ? ಪರಿಕಿಸಲು ||
ಅಘವ ಹರಿಪೊಡೆ ನೃಪತಿಯಲ್ಲದೆ
ವಿಗಡ ನರರಿಂ ಶಕ್ಯಮೇ ಯಿದ
ಬಗೆದು ರಾಷ್ಟ್ರವ ಸಲಹು ಶ್ರೀ ಜಯಚಾಮರಾಜೇಂದ್ರ || ೩೬ ||

ನರಿಯೊಳಗೆ ಧೈರ್ಯವನು ಗುರುತರ
ವುರಿಯೊಳಗೆ ಶಾಂತಿಯನು ಸಂತತ
ಕುರುಬರೊಳಗತಿ ಚಲುವಿಕೆಯ ಮಿಗೆ ಪರಸುವದು ಸೊಗಸೆ ||
ಮರುಳರೊಳು ಸನ್ಮತಿಯು ಮೇಣಾ
ದುರುಳರೊಳು ವೈವೇಕಮಿಹುದೆ?
ಘುರುಚದುರ ನೀ ಸಲಹು ಶ್ರೀ ಜಯಚಾಮರಾಜೇಂದ್ರ || ೩೭ ||

ಬೇಡುವನೊಳನವಮಾನವನ್ನು ರೆ
ಕೋಡಗನ ಗಂಭೀರತೆಯ ವರ
ನಾಡಿಗಧಿಪತಿಯೊಳು ವಿವೇಕವ ಪರಸುವುದು ಹಿತವೆ? ||
ರೂಢಿಗೀಶನೆ ಪರಮಪೂಜ್ಯನೆ
ಗಾಡಿಕಾರರ ನಂಬುವುದೆ? ಕರ
ಜೋಡಿಪೆಂ ನೀ ಸಲಹು ಶ್ರೀ ಜಯಚಾಮರಾಜೇಂದ್ರ || ೩೮ ||

ಕೊರಳೊಳಗೆ ಗರಳವನು ಸಂಪದ್
ಭರಿತ ಶಿರದೊಳು ಸಸಿಯನಾಂತಿಹ
ಪುರಹರನ ವರಕರುಣವೀಕ್ಷಣದಂತೆ ಈ ಜಗದೆ ||
ಪರರ ಗುಣವನು ಮರೆದು ನಿಮ್ಮುರು
ತರದ ಗುಣದಿಂ ಸಕಲ ಜನತೆಯ
ಕರವಿಡದೆ ಮಿಗೆ ಸಲಹು ಶ್ರೀ ಜಯಚಾಮರಾಜೇಂದ್ರ || ೩೯ ||

ಅತಿಶಯದೆ ಚಂದನವನರಿದುಂ
ಮಥಿಸಿದೊಡೆ ಕಿಡಿಯಪ್ಪದೇ? ಸನ್
ಮತಿಯುತರ ಚಿತ್ತವನು ನೋಯಿಸೆ ಕೇಡು ಬರದಿಹುದೆ? ||
ಗತಿಯು ನಿರ್ಗತಿಯಾದೊಡೇಂ ಸ
ದ್ಗತಿಯೊಳಿಪ್ಪುದೆ ಹಿತವು ಮಹಿಸುರ
ಹಿತನೆ ಜನತೆಯ ಸಲಹು ಶ್ರೀ ಜಯಚಾಮರಾಜೇಂದ್ರ || ೪೦ ||

ಕ್ರೀಡೆ ಮೆಲ್ಲುವ ಕಪ್ಪೆಯುದರದಿ
ಪಾಡದಿಹುದೇ ಶೂಲ ಪರಿಕಿಸೆ
ರೂಢಿಯೊಳು ಗೈಯ್ಯುತಿಹ ಕರ್ಮಗಳೂಡದಿರ್ದಪುವೆ? ||
ಮಾಡೆ ಸುಜನರ ನಿಂದೆಯನಿಶಂ
ಕೇಡಮುದಿಸದೆ ಯಿಹುದೆ ? ನೃಪವರ
ನಾಡನೆಲ್ಲವ ಸಲಹು ಶ್ರೀ ಜಯಚಾಮರಾಜೇಂದ್ರ || ೪೧ ||

ಕಿವಿಯದಿರೆ ತಾವ್ ಕೇಳರ್ಕೈ ಮಿಗೆ
ಸುವಿಲಸಿತ ನೇತ್ರಮಿರೆ ನೋಡರು
ವಿವಿಧ ಪಥದರೆನಾಲ್ಗೆಯುಳ್ಳರು ಸಿರಿಯ ಸ್ನೇಹಿತರು ||
ಶಿವಶಿವಾ ಸಿರಿಯುತರ ಬೆಡಗದ
ವಿವರಿಪುದು ನಲವೆಂಬೆ ಸದ್ಗುಣಿ
ಯವಿರತವು ನೀ ಸಲಹು ಶ್ರೀ ಜಯಚಾಮರಾಜೇಂದ್ರ || ೪೨ ||

ಕರದೊಳುರಗವ ಪಿಡಿದವರು ನೆರೆ
ಸಿರಿಯುತರು ಮೋಸಿಗರು ಮೂರ್ಖರು
ತರುಣಿಮೋಹಕರುರು ಕುಪಿತರು ಪಸಿವು ತೃಷೆ ಜನತೆ ||
ದುರುಳರರಿಯೊಳು ಕಾಯ್ವವರು ಮೈ
ಮರೆದು ಕಿಡುವರು ಪುಸಿಯದೇಂ ಮಹಿ
ಸುರಪತಿಯೆ ನೀ ಸಲಹು ಶ್ರೀ ಜಯಚಾಮರಾಜೇಂದ್ರ || ೪೩ ||

ಸಿರಿಯದಿರಲವ ಪರಮಧೀರನು
ಸಿರಿಯದಿರೆ ತಾನಿಂದ್ರ ಚಂದ್ರನು
ಸಿರಿಯೆ ಸೊಬಗುಂ ಸಿರಿಯೆ ಪಿರಿದುಂ ಸಿರಿಯೆ ಕೀರ್ತಿಯುತಂ ||
ಸಿರಿಯೆ ಮರ್ತ್ಯಂ ಸಿರಿಯೆ ಸಗ್ಗಂ
ಸಿರಿಯೆ ಕಲ್ಪವು ಯೆನುತಲುಲಿವರು
ಪರಮಚರಿತನೆ ಸಲಹು ಶ್ರೀ ಜಯಚಾಮರಾಜೇಂದ್ರ || ೪೪ ||

ಸಿರಿಯನುಳ್ಳವ ಕುರುಡ ಕುಷ್ಟಂ
ಮರುಳ ಬದಿರಂ ಮೂಕ ವಿಕಲಿತ
ಹರೆಯುಳಿಯುತತಿ ವೃದ್ಧನಾದೊಡು ಶ್ರೇಷ್ಠನೆಂವೆನುತೆ ||
ಸಿರಿಯ ಮೋಹದೆ ಗುಣವ ಗಣಿಸದೆ
ನರರು ತಮ್ಮಯ ಪೆಣ್ಣಸೀವರು
ದುರಿತಹರ ನೀ ಸಲಹು ಶ್ರೀ ಜಯಚಾಮರಾಜೇಂದ್ರ || ೪೫ ||

ಸಿರಿಯನುಳ್ಳವ ದುಷ್ಟನಾದರು
ಸಿರಿಯುತನು ತಾ ಕೃಪಣನೆಂದರು
ಸಿರಿಯನಾಲಂಗಿಸವ ಮಡೆಯನು ಮೂರ್ಖನಾದೊಡೆಯುಂ ||
ಪರಮ ಪದವೀಧರನು ಯೆನ್ನುತೆ
ಪಿರಿಯತನವನ್ನೀವರವಗೀ
ಧರೆಯ ಚದುರೇಂ? ಸಲಹು ಶ್ರೀ ಜಯಚಾಮರಾಜೇಂದ್ರ || ೪೬ ||

ಸಿರಿಯನುಳ್ಳವ ಚೋರನಾದೊಡು
ಸಿರಿಯನುಳ್ಳವ ಕಪಟಿಯೆಂದೊಡು
ಸಿರಿಯಮೋಹಿಯು ರಾಜನಿಂದಕನಾಗಿ ಮೆರೆದೊಡೆಯು ||
ಸಿರಿಯೆ ದೊಡ್ಡಿತು ಯೆಂದು ಬಯಸವ
ನರಿಗಳೇ ಪೊಗಳುವರು ಲೋಕದ
ಪರಿಯದೆಂತೊ? ಸಲಹು ಶ್ರೀ ಜಯಚಾಮರಾಜೇಂದ್ರ || ೪೭ ||

ಸಿರಿಯೆ ಲೋಕದ ಮಾನ್ಯನಿಧಿ ಯೈ
ಸಿರಿಯೆ ಮಾನವ ಪುಣ್ಯಸುಧೆ ಘನ
ಸಿರಿಯೆ ಧರಣಿಯ ಕಲ್ಪವೃಕ್ಷವು ನಿರುತ ಹಿತಕರವು ||
ಸಿರಿಯೆ ದಿನಮಣಿ ಸಿರಿಯೆ ಕುಲಮಣಿ
ಸಿರಿಯೆ ಗುಣಮಣಿ ಯೆಂದು ಪಲವರು
ಮರುಳರಪ್ಪರು ಸಲಹು ಶ್ರೀ ಜಯಚಾಮರಾಜೇಂದ್ರ || ೪೮ ||

ಸಿರಿಯ ಬಯಕೆಯು ಕಷ್ಟ ಗುರುತರ
ಸಿರಿಯ ಗಳಿಕೆಯು ಕಷ್ಟ ಮೇಣಾ
ಸಿರಿಯ ನಿಲಿಸುವಡತುಲ ಕಷ್ಟವು ಪರಿಕಿಸಲು ನಲವಿಂ ||
ಸಿರಿಯ ಭೋಗವು ಪಿರಿದು ಪರಹಿತ
ಸಿರಿಯು ಧರ್ಮಿಯ ಪಾಲು ಯೆಂಬುದು
ನಿರುತ ಸತ್ಯವು ಸಲಹು ಶ್ರೀ ಜಯಚಾಮರಾಜೇಂದ್ರ || ೪೯ ||

ಸಿರಿಯೊದವಿದಾ ಕಾಲದೊಳು ವೈ
ಮರೆಯದೇ ಭಜಿಸುವುದು ದೇವನ
ಪರಮ ಪದಗಳ ಚಿತ್ತಶುದ್ಧತೆ ಭಕುತಿ ಸಂಪದದಿ ||
ನಿರುತ ಪರಹಿತದೆಸೆಯೊಲಾ ಪುರ
ಹರನ ಕರುಣಾಬಲವು ದೊರೆಗುಂ
ಪರಮ ಪಂಡಿತ ಸಲಹು ಶ್ರೀ ಜಯಚಾಮರಾಜೇಂದ್ರ || ೫೦ ||

ಧನಿಕ ತಾನವಿಚಾರಿಯಾದೊಡೆ
ಮನೆಯಹನು ಕಾಮಾದಿರಿಪುವಿಗೆ
ವಿನುತ ಶಿವಕಾರ್ಯದೊಳು ಕುರುಡತಿಮೂಕನನು ಪೋಲ್ವಂ ||
ದನಕೆ ಮೇಣ್ ಮನುಜರಿಗೆ ಕಟ್ಟಿಗೆ
ಯೆನಿಪ ತೃಣಮರಕೆಣೆಯು ಸದ್ಗುಣ
ಮಣಿಯೆ ಮಹಿಸುರ ಸಲಹು ಶ್ರೀ ಜಯಚಾಮರಾಜೇಂದ್ರ || ೫೧ ||

ಪಳಿದು ಪೆಂಡಿರು ತಿರುಕನೆಂಬರು
ಬಳಿಯೆ ಕೂಡರು ಹಿತರು ಸಂತತ
ಛಲದೆ ನುಡಿಸರು ಬಂಧುನಿವಹವಮ್ಮಾತೆಯಾತ್ಮಜರು ||
ಒಲವು ಪೋಪುದು ಪಿತೃವಿನೊಳು ಗಡ
ಕುಲದಿ ಬೆರಿಸರು ಸಿರಿಯದಿಲ್ಲನ
ನೊಲಿದು ಕೃಪೆಯಿಂ ಸಲಹು ಶ್ರೀ ಜಯಚಾಮರಾಜೇಂದ್ರ || ೫೨ ||

ಧನಿಕನಿಗೆ ಕರುಣಾದಿ ದಯೆಯುಂ
ವಿನಯ ದಾಕ್ಷಿಣ್ಯಾದಿ ಗುಣಮಿರ
ಲನುಪಮಿತ ಸಿರಿ ಪುಣ್ಯ ಸೌಖ್ಯವ ಪಡೆದು ರಂಜಿಪನು ||
ಘನಹಿತವು ಧರ್ಮಗಳು ನಿಲುಗುಂ
ತನುಜರುಂ ವಂಶವದು ಪೆರ್ಚುಗು
ವಿನುತ ಮುಕ್ತನೆ ಸಲಹು ಶ್ರೀ ಜಯಚಾಮರಾಜೇಂದ್ರ || ೫೩ ||

ಧನಮದದೆ ಕಂಗಾಣದವರಿಗೆ
ಘನದರಿದ್ರಾಂಜನೆಯು ಬಳಿವತಿ
ಋಣವೆಂಬ ಪಥ್ಯದೊಳು ನೂಂಕಿದೊಡಳಿವುದಾ ಮದವು ||
ಧನವು ಬಡತನವಿರ್ದೊಡೇಂ ಸ
ದ್ಗುಣವೆ ಜನರ್ಗೈಸಿರಿಯು ಮರ್ಮವು
ಧನದಹಿತವರ ಸಲಹು ಶ್ರೀ ಜಯಚಾಮರಾಜೇಂದ್ರ || ೫೪ ||

ಧರಣಿಯೊಳು ಹರಭಕ್ತರೊಡನತಿ
ಸರಸವಿರಸವನೆಸಗಿದೊಡೆ ಗಡ
ತರಣಿಸಸಿಯಿಹಪರಿಯಘೋರರತೆ ನರಕವೆ ತವರು ||
ಪರಮತರ ಧನಕನಕವೈಸಿರಿ
ಯರಿಯೆ ಸುರುಚಿರ ಪುಣ್ಯಮಳಿಗುಂ
ದುರಿತಹರ ನೀ ಸಲಹು ಶ್ರೀ ಜಯಚಾಮರಾಜೇಂದ್ರ || ೫೫ ||

ದಂಡದೋಷಕೆ ಕಳುವು ಮದದಾ
ದಂಡಿಗಲ್ಲದೆ ಪಾಪಿಯೈಸಿರಿ
ಪುಂಡು ಜೂಜಿಗೆ ಮದ್ಯಪಾನಂ ದಾಸಿಯರ ಸೇರಿ ||
ಕಂಡು ಕಾಣದ ತೆರದೊಳಾವುದು
ತಂಡಕರ ಗೆಳೆತನದ ಸೊಂಪಿದ
ಖಂಡ ಸಂಪದ ಸಲಹು ಶ್ರೀ ಜಯಚಾಮರಾಜೇಂದ್ರ || ೫೬ ||

ಧನವೆ ನರರಿಗೆ ಧನವೆ ಸುರರಿಗೆ
ಧನವೆ ಮರ್ತ್ಯಕೆ ಧನವೆ ಸಗ್ಗಕೆ
ಧನವೆ ಜಗದೆಸೆವತುಲ ಕಾರ್ಯಕಗತ್ಯವೆಂದೆನುತೆ ||
ಧನವ ಗಳಿಸಲು ಸಕಲ ಜೀವರು
ದಿನದಿನವು ಬೇಸತ್ತು ಸಾಯ್ವರು
ಜನಪತಿಯೆ ನೀ ಸಲಹು ಶ್ರೀ ಜಯಚಾಮರಾಜೇಂದ್ರ || ೫೭ ||

ಭೂತ ಫಣಿ ಪೈಶಾಚ ಮರುಳರು
ನೀತಿಯುತರತಿ ಮಡೆಯ ಮೂರ್ಖರು
ಪೋತು ಕಾದಿರಲ್ಕೈಸಿರಿಯನತಿ ಬಂಧುರದಿ ನಿರುತ ||
ಭೂತಲದಿ ಮಾನವರು ಧನಕತಿ
ಭೀತು ಬಾಳ್ವುದು ಚೋದ್ಯಮೋ? ವರ
ಭೂತಲಾಧಿಪ ಸಲಹು ಶ್ರೀ ಜಯಚಾಮರಾಜೇಂದ್ರ || ೫೮ ||

ಅಡವಿಗಿಡಮರಬಳ್ಳಿಯೆಲ್ಲವ
ದೊಡವೆಯೆನ್ನಲು ನಲಿಯತೊಡಗುಂ
ಪೊಡವಿಯಲಿ ಹೇಮಗಿರಿಯೆನುತಾ ರವಿಯು ಸುತ್ತರಿಯೆ ||
ಬಡನರರ ಪಾಡೇನು ತಮ್ಮಯ
ಪೊಡಲಿಗಾಶೆಯ ಬಡುತೆ ಸಾಯ್ವರು
ಪೊಡವಿಪತಿ ನೀ ಸಲಹು ಶ್ರಿ ಜಯಚಾಮರಾಜೇಂದ್ರ || ೫೯ ||

ಮೀರಿ ಪುಣ್ಯಂ ಪಾಪ ಗಳಿಪಗೆ
ತೋರುಗುಂ ತ್ರೈದಿನದೆ ಫಲವಂ
ತೋರದಿರೆ ಕುಡುತಿಹುದು ಮೂರನೆ ಮಾಸದವಧಿಯಲಿ ॥
ಮೀರಿದೊಡೆ ತ್ರೈಬರಿಸದೊಳು ತಾಂ
ಬೀರುವುದು ಫಲವನ್ನು ಸಂತತ
ಪಾರ ಮಹಿಮನೆ ಸಲಹು ಶ್ರೀ ಜಯಚಾಮರಾಜೇಂದ್ರ ॥ ೬೦ ॥

ಭಿಕ್ಷುಕರ ಜರಿಯುವುದು ಪಾಪಂ
ಭಿಕ್ಷುಕರ ಪೊಡೆಯುವುದು ಪಾಪಂ
ಭಿಕ್ಷವೀಯದೆ ಕಳಿಸುವುದು ಕಡುಪಾಪ ಧರೆಯೊಳಗೆ ॥
ಭಿಕ್ಷುಕರು ಬಂದೊಡನೆ ಪರಿಕಿಸೆ
ಭಿಕ್ಷವೀಯದೆ ನಿಲಿಸಲಾಗದು
ತ್ರ್ಯಕ್ಷರೂಪನೆ ಸಲಹು ಶ್ರೀ ಜಯಚಾಮರಾಜೇಂದ್ರ ॥ ೬೧ ॥

ಭೋಗಿ ಪಾಪಿ ಕಿರಾತ ಕುರುಡಂ
ರೋಗಿ ಕ್ಷತ್ರಿಯ ವೈಶ್ಯ ವಿಕಲಂ
ರಾಗಿ ದಿವಿಜಂ ಶತೃವಂತ್ಯಜ ಮರುಳನೆನಿಸಿದೊಡುಂ ॥
ಜೋಗಿ ಜಂಗಮ ಬದಿರನಾದೊಡು
ಬೇಗಿ ಭಿಕ್ಷವನೀವುದುಚಿತ ಸು
ಯೋಗವರ ನೀ ಸಲಹು ಶ್ರೀ ಜಯಚಾಮರಾಜೇಂದ್ರ ॥ ೬೨ ॥

ಹಿಂದೆ ನಾವ್ ದಾನವನು ಗೈಯ್ಯದೆ
ಯಿಂದು ದಾರಿದ್ರ್ಯವನು ಪೊರ್ದುತೆ
ಬಂದಿಹೆವು ನಿಮ್ಮ ಬಳಿ ಯಾಚಿಸಲೆನುತೆ ಭಿಕ್ಷುಕರು ॥
ಮುಂದೆ ಸಾರುತ ಬರುವರದರಿಂ
ದಂದು ಭಿಕ್ಷವ ಕುಡುವುದುಚಿತ ವ
ಸುಂಧರಾಧಿಪ ಸಲಹು ಶ್ರೀ ಜಯಚಾಮರಾಜೇಂದ್ರ ॥ ೬೩ ॥

ತಿರುಕಗಿರುತಿಹ ಶೌರ್ಯ ಧೈರ್ಯಂ
ಪರವಿಚಾರಂ ರೂಪು ಯೌವನ
ಸರಸವಾಙ್ಮಾಧುರ್ಯನೀತಿನಿಪುಣತೆಯುಯುಕ್ತಿ ॥
ಪರಮ ಕವಿತಾರಚನೆಶಕುತಿಯು
ಮೆರೆಯೆ ದೇಹೀ ಯೆಂಬುದಹಿತವು
ಶರಣಸಂತಸ ಸಲಹು ಶ್ರೀ ಜಯಚಾಮರಾಜೇಂದ್ರ ॥ ೬೪ ॥

ಧರ್ಮದಿಂ ನೆರೆ ಭುಕುತಿ ಮುಕುತಿಯು
ಧರ್ಮದಿಂದಾರೋಗ್ಯ ಸಂತತ
ಧರ್ಮದಿಂದಾಯುಷ್ಯವರ್ಧತೆ ಪುಣ್ಯಮನ್ನಣೆಯು ॥
ಧರ್ಮದಿಂ ಭೂತಲವ ಸ್ಥಿತಿ ಸ
ದ್ಧರ್ಮಮೆ ಜೀವನವ ನೆಲೆಯತಿ
ಧರ್ಮಸಂಪದ ಸಲಹು ಶ್ರೀ ಜಯಚಾಮರಾಜೇಂದ್ರ ॥ ೬೫ ॥

ದುರಿತಕರ್ಮವ ತ್ಯಜಿಸೆ ಧರ್ಮವು
ದೊರೆಗು ಕರುಣದಿ ಪುಣ್ಯಕೃತಿಗಳ
ನರಿತು ಮಾಳ್ಪುದು ಚಿತ್ತ ಶುದ್ಧತೆ ಭಕ್ತಿಮನದಿಂದೆ ॥
ಸುರನರೋರಗಯಕ್ಷರಾದ್ಯರು
ಪರಮಧರ್ಮವನುಳಿಯರನಿಶಂ
ಶರಣರಕ್ಷಕ ಸಲಹು ಶ್ರೀ ಜಯಚಾಮರಾಜೇಂದ್ರ ॥ ೬೬ ॥

ಚಂದನಾ ಕಲೆ ಕಾವು ಜಗದೊಳು
ಚಂದ್ರನಿಗೆ ಕಾರ್ಬಣ್ಣವರರೆಯೆ
ಸಿಂಧುವಿನೊಳತಿ ಕ್ಷಾರಮಿರ್ಪುದು ಲೋಕತಿಳುವಳಿಯು ॥
ಇಂದುಧರನವತಾರಿ ಪ್ರಭುವಂ
ನಿಂದಿಪರು ಸನ್ಮುಕ್ತರಹರೇ
ನಿಂದುಕುಲವರ ಸಲಹು ಶ್ರೀ ಜಯಚಾಮರಾಜೇಂದ್ರ ॥ ೬೭ ॥

ಹರನ ಯಾಚನೆಗೊಯ್ದು ಮಂದರ
ಧರನ ಭವದೊಳು ನೂಂಕಿ ಸರಸತಿ
ವರನ ಶಿರವನು ಹರಿಸಿ ಮೆರೆದಾ ವಿಧಿಯ ದುರ್ಭರಕೆ ||
ನರರು ಶಕ್ಯರೆ? ಯಿದನು ಸಕಲರು
ಮರೆಯೆ ಸಂತತ ಹಣ್ಣಿಕಿಡುವರು
ಪರಮ ವೀರನೆ ಸಲಹು ಶ್ರೀ ಜಯಚಾಮರಾಜೇಂದ್ರ || ೬೮ ||

ದಾನವೀಯುವ ಜನಕೆ ಜಗದೊಳು
ದೀನನರರಧ್ಯಾತ್ಮಚಿಂತನೆ
ಜ್ಞಾನಿಗಳಿಗಜ್ಞಾನಿ ದುರ್ಜನ ಸುಜನರಿಗೆ ಸತತ ||
ಮಾನನಿಧಿಗಪಮಾನಿಗಳು ಕುಲ
ಹೀನರಿಗೆ ಕುಲವಂತರರಿಗಳು
ಮಾನವಾಧಿಪ ಸಲಹು ಶ್ರೀ ಜಯಚಾಮರಾಜೇಂದ್ರ || ೬೯ ||

ಪರಿಕಿಸಲು ರಸಿಕನಿಗೆ ರಸಿಕಂ
ಪರಮಕವಿಗುರುಕವಿಯು ಪರತರ
ವಿರತನಿಗೆ ವಿರತಂ ನಿರಂತರ ವಿರಸದೋರುತಲಿ ||
ಪೆರದಲೆಯನಾ ಮಹಿಮೆಯನು ತಾವ್
ಮರೆದು ನರಗುರಿಯೆನಿಸಿ ಮೆರೆವರು
ಹರುಷವರ್ಧನ ಸಲಹು ಶ್ರೀ ಜಯಚಾಮರಾಜೇಂದ್ರ || ೭೦ ||

ಹಸಿದವಗೆ ಮೇಣಲಸಿದಗೆ ನೆರೆ
ವಿಷಯಿ ವಿಕಳಾಂಕನಿಗೆ ಕುಪಿತಗೆ
ಕುಷಿಗಳಿದು ನಿದ್ರಿಪಗೆ ಮೂರ್ಖಗೆ ಕಾರ್ಯಕಾತುರಗೆ ||
ವ್ಯಸನಿಯಿಗೆ ಕಡುತೃಷಿಗೆ ಸನ್ನುಡಿ
ಮಸುಕುಗೊಳ್ವುವು ಸತತ ಸನ್ನುತ
ಶಶಿಕುಲೇಂದಿರ ಸಲಹು ಶ್ರೀ ಜಯಚಾಮರಾಜೇಂದ್ರ || ೭೧ ||

ಪಾತಕೀಪರದಾರ ಗುರುಗಳ
ನೀತಿಗಾಣದ ಪೈವ ವಿಪ್ರರ
ಘಾತಕರ ಗರ್ಭಿತರ ಶಠತತಿ ಗೋವಕಾಯ್ದ್ವವರ ॥
ಭೂತ ಛಪಿಷಿಯುಸಿರಿಯದಿರ್ಪರ
ವ್ರಾತನಾಲಿಪ್ಪುದಸುಚಿತವು ಸುವಿ
ನೀತಿಕೋಪಿದ ಸಲಹು ಶ್ರೀ ಜಯಚಾಮರಾಜೇಂದ್ರ ॥ ೭೨ ॥

ಚಿನ್ನವನು ಕೊಳುತಿರ್ಪನದರ
ತ್ರ್ಯಸ್ನತಿಯ ಪರಿಕಿಸುವ ತೆರದಿಂ
ಪನ್ನಗೇಂದ್ರನು ನೃಪತಿರೂಪನೆ ಧರಿಸುತೀ ಜಗಕೆ ॥
ನನ್ನಿಯಿಂದ್ಪೈದಿಪ್ಪ ಸದ್ಗುಣ
ಪನ್ನ ಯಿಾಕ್ಷಿಸಿದಪೆ ಸತ್ಯ ಪ್ರ
ಸನ್ನ ಪೂರುತಿ ಸಲಹು ಶ್ರೀ ಜಯಚಾಮರಾಜೇಂದ್ರ ॥ ೭೩ ॥

ಹಿಂದೆ ಲಕುಮಿಯು ಗೃಹದೆ ಶಿವನಾ
ನಂದದಿಂ ಭಿಕ್ಷೆಯನು ಬೇಡಲು
ಮುಂದನುತಿಗಳು ಕಾಣದೆಲೆ ತಾವ್ ಮೋಸ ಪೋದರ್ಗಡನು ॥
ಇಂದುನಾವರಿತಿರಲು ಭೂಪತಿ
ಯಂದ ಪದಗಳ ಮರೆವುದೊಳಿತೆ ? ಮು
ಕುಂದ ಸನ್ನಿಭ ಸಲಹು ಶ್ರೀ ಜಯಚಾಮರಾಜೇಂದ್ರ ॥ ೭೪ ॥

ಶಿಶುವಧೆಯು ಗೋವಧೆಯು ಸ್ತ್ರೀವಧೆ
ವಸುಧೆಯೊಳಗಶ್ವವಧೆ ದ್ವಿಜವಧೆ
ನಸಿಸ ನರವಧೆಗೈಯ್ಯುತಲಿ ತಾ ಸುಖವ ಬಯಸುವಗೆ ॥
ಋಶವಳಿಗು ಸುಖವಳಿಗು ಸಂತತ
ವಿಷಮ ನರಕವು ಕಾದಿಹುದು ಸಂ
ತಸವೆ ಯಮ್ಮನು ಸಲಹು ಶ್ರೀ ಜಯಚಾಮರಾಜೇಂದ್ರ ॥ ೭೫ ॥

ಕೊಲ್ಲದೆಯೆ ಹುಸಿಯದೆಯೆ ಕಳುವಿನಿ
ಸಿಲ್ಲದೆಯೆ ಪರಸತಿಯ ಬಯಸದೆ
ಹೊಲ್ಲದಾನಕೆ ಕೈಯ್ಯನೀಡದೆ ಕಾಲವೆಲ್ಲವನು ||
ಸಲ್ಲಲಿತದೊಳು ಕಳೆಯುವುದು ಭೂ
ವಲ್ಲಭನೆ ಸಕಲಜನಮತ ನೀ
ನೆಲ್ಲರಂ ನೆರೆ ಸಲಹು ಶ್ರೀ ಜಯಚಾಮರಾಜೇಂದ್ರ || ೭೬ ||

ಕೊಲ್ಲದಿಹುದೇ ಧರ್ಮ ಪರಧನ
ವೊಲ್ಲದಿಹುದೇ ಶೀಲ ಪರಸತಿ
ಯೆಲ್ಲರನು ಭಗಿನಿಯರೊಲೀಕ್ಷಿಪುದತುಲ ಸಂಪದವು ||
ಖುಲ್ಲತೆಯ ಮತ್ಸರವನುಳಿಯುತೆ
ಸಲ್ಲಲಿತದಿಂ ಕಾಲ ಕಳೆವುದು
ಬಲ್ಲತನವೈ ಸಲಹು ಶ್ರೀ ಜಯಚಾಮರಾಜೇಂದ್ರ || ೭೭ ||

ಅಕ್ಕುಲಜಗೈ ಸಿರಿಯನೀವುದು
ಮರ್ಕಟತೆ ಮಂದಿಯೊಳಗಾಡ್ವುದು
ಠಕ್ಕು ಗೈವರ ಮಾತಗೇಳ್ವುದು ಸಕಲರೊಲವಿಂದ ||
ಹೊಕ್ಕು ಕರ್ಮಾಂತರದೆ ಧರ್ಮವ
ಮಿಕ್ಕು ನಡೆಯುತಲಿಹುದೆ ಯಿಾ ಕಲಿ
ಯುಕ್ಕುತಿಹ ದಿನ ಸಲಹು ಶ್ರೀ ಜಯಚಾಮರಾಜೇಂದ್ರ || ೭೮ ||

ಉರಗನನು ಕಾಣುತಿಹ ಕಪ್ಪೆಯೊ
ಗಿರಿಯೊಳಿನ ಪುಲಿಕಂಡ ಪಶುವೊ
ಮೆರೆವ ಸಿಂಹನ ಕಾಣ್ಬ ಕರಿಯೊ ಯೆಂಬ ಭಾವದಲಿ ||
ಪರಮನೃಪನೊಳು ಭಕುತಿದಾಳ್ದತಿ
ಹರುಷದಿಂ ಬಾಳುವುದು ಧರ್ಮವು
ಧರಣಿವಲ್ಲಭ ಸಲಹು ಶ್ರೀ ಜಯಚಾಮರಾಜೇಂದ್ರ || ೭೯ ||

ರಜತಗಿರಿಯುಪನೆತ್ತಿ ಬಯಸುತ
ಲಜಸುತನು ರಾವಣನು ತನ್ನಯ
ಭುಜಬಲವ ಪಾರ್ಶ್ವದ ತೆರದೊಳಗೀ ಧರಿತ್ರಿಯೊಳು ||
ಭುಜಗಭೂಷಣ ಭಕುತಿಸಂಪದ
ನಿಜವನರಿಯುವೆ ಕಿಡುವುದೊಳಿತೇಂ?
ಕುಜನಮರ್ದನ ಸಲಹು ಶ್ರೀ ಜಯಚಾಮರಾಜೇಂದ್ರ || ೮೦ ||

ಅಸಿಗೆ ತೊಡೆವಿಹ ಘೃತದ ಕಂಪಿಂ
ಗೊಸೆದು ಸಿಲ್ಕಿದ ಜಿಹ್ವೆಯದು ತಾ
ಕುಸುರಿಪೋಗವೆಯುಳಿವುದೆ ನಾವ್ ಪರಿಕಿಸಲು ನಲವಿಂ ||
ಸಸಿಕುಲೇಂದ್ರನ ವುಗ್ರತೆಗೆ ಯು
ಮ್ಮಸುವುಳಿದು ಸುಖಪಹುದೆ ಭೂಪತಿ
ಘಸಣೆಗೊಳ್ಳದೆ ಸಲಹು ಶ್ರೀ ಜಯಚಾಮರಾಜೇಂದ್ರ || ೮೧ ||

ಪರಿಕಿಸಲು ಸಾಗರಕು ಮುಡುವಿಗು
ಸರಿಯಹುದೆ ಗಿಡುಗನಿಗು ಗಿಳಿಗುಂ
ಮೆರೆವ ಪೊಡವಿಗು ಪೊಳ್ಳಿಗುಂ ಸಮವಹುದೆ ಯೀಕ್ಷಿಸಲು ||
ಬರಿಯ ಭ್ರಮೆಯಿಂದೇನು? ಶಿವಶಿವ
ದೊರೆಗೆ ನರತತಿ ಸರಿಯೆ ಸಂತತ
ಕರುಣನಿಧಿ ನೆರೆ ಸಲಹು ಶ್ರೀ ಜಯಚಾಮರಾಜೇಂದ್ರ || ೮೨ ||

ಕೊಂಡೆಯರ ನುಡಿ ಕಿವಿಗೆ ಭೂಷಣ
ಕೊಂಡೆಯುವೆ ಮಳೆಗಾಲ ಜಗಕತಿ
ಕೊಂಡೆಯರ ಮಾರ್ಗಗಳೆ ಹೃದಯಕೆ ತರಣಿ ಕಿರಣದೊಲು ||
ಕೊಂಡೆಯವನಾಲಿಪುದು ಜನಕುರೆ
ಚಂಡಿಯಪ್ಪುದು ಸಕಲ ಕಾರ್ಯಕೆ
ಪಂಡಿತೇಂದ್ರನೆ ಸಲಹು ಶ್ರೀ ಜಯಚಾಮರಾಜೇಂದ್ರ || ೮೩ ||

ಗಂಡಹೆಂಡಿರ ತ್ಯಜಿಸುವುದು ಮಿಗೆ
ತಂಡಕರ ಬೆರಸುವುದು ಕೊಂಡೆಯ
ಭಂಡುಗೆಡಿಪುದು ನರರ ಜನ್ಮವ ಮಿಂಡೆಯೊಡವೆರಸಿ ||
ರಂಡೆಕೂಟವು ದಿಂಡೆಗೆಳೆತನ
ಪಂಡಿತರ ಬೆಂಡಾಗಿ ಮಾಳ್ಪುದು
ಕೊಂಡೆಯವು ಘೀ ಸಲಹು ಶ್ರೀ ಜಯಚಾಮರಾಜೇಂದ್ರ || ೬೪ ||

ಪಾಲಿನೊಳು ಪುಳಿಯಿರಲು ಲೋಕದೆ
ಮೇಲೆನಿಪ ಜೇನಿನೊಳು ಶರ್ಕರೆ
ಲೀಲೆವೆರೆದಾ ಸತಿಯು ಯತಿಗಿರೆ ಕಿಡದಿಹರೆ ನಿರುತ ||
ಸಾಲಿಗರ ಮಧ್ಯದಲಿ ಸುಜನ ವಿ
ಶಾಲಮತಿ ದುರ್ಮತಿಯ ನಿವಹದಿ
ಬೀಳೆ ಕಿಡುಗುಂ ಸಲಹು ಶ್ರೀ ಜಯಚಾಮರಾಜೇಂದ್ರ || ೬೫ ||

ಯತಿ ಕಿಡುಗು ಸತಿ ಸಂಗದೊಳು ಪತಿ
ವ್ರತೆಯು ದುರ್ಮಂತ್ರದಲಿ ಕಿಡುಗುಂ
ಮತಿ ಕಿಡುಗು ಮಧುಪಾನದೊಳು ವರಸುತರು ಪಾಲನೆಯಿಂ ||
ಗತಿ ಕಿಡುಗು ದುರ್ವಿಷಯದಲಿ ಭೂ
ಪತಿ ಕಿಡುಗು ದುರ್ಜನ ವಿತತಿಯಿಂ
ಕ್ಷಿತಿಪತಿಯೆ ನೆರೆ ಸಲಹು ಶ್ರೀಜಯಚಾಮರಾಜೇಂದ್ರ || ೬೬ ||

ಶಕ್ತಿಯಿಂ ಜನಿಸಿರ್ಕು ಜಗ ಚಿ
ಚ್ಛಕ್ತಿಯಿಂ ಸುಖವಹುದು ಲೋಕದಿ
ಶಕ್ತಿಯಿಂ ದೈವತ್ವಭುಕ್ತಿಯು ಮುಕ್ತಿ ಸಂಪದವು ||
ಶಕ್ತಿಯಿಂ ಮಾಹತ್ವ ಬಪ್ಪುದು
ಶಕ್ತಿಭಿಕ್ಷೆಯು ಪರಮ ಪುಣ್ಯವು
ಶಕ್ತಿದಾಯಕ ಸಲಹು ಶ್ರೀ ಜಯಚಾಮರಾಜೇಂದ್ರ || ೬೭ ||

ನೊಂದು ಸೈರಿಸಲಾರದವನತಿ
ಯಂದದಿಂದ ಕನಿಷ್ಠನೆನಿಪನು
ನೊಂದು ತಾಳುಮೆಯನ್ನು ಬಡುತಿಹ ಮಧ್ಯಮನು ನಿರುತ ॥
ನೊಂದ ನೋವನು ಪೇಳ್ದೆ ಸಹಿಪ ಗು
ಣೇಂದ್ರ ತಾನುತ್ತಮನು ನೀ ಕೃಪೆ
ಯಿಂದೆ ಮಹಿಸುರ ಸಲಹು ಶ್ರೀ ಜಯಚಾಮರಾಜೇಂದ್ರ ॥ ೭೮ ॥

ಘುಟಿಕೆ ಮೂಲಿಕೆಯಂಜನಂಗಳು
ಕುಟಿಲಮಂತ್ರವು ರಸನೆಸಿದ್ಧಿಯು
ನಟಿಪುದಾವೇಶಾದಿಗಳು ಪರಕಾಯದೊಗುವಿಕೆಯು ॥
ನಿಟಿಲನೇತ್ರನ ಮರೆವು ಜಗದೊಳು
ಕುಟಿಲದೈವದ ಪೂಜೆ ಯಿವುಗಳು
ಸಟೆಯದಲ್ಲವೆ ಸಲಹು ಶ್ರೀ ಜಯಚಾಮರಾಜೇಂದ್ರ ॥ ೭೯ ॥

ಹಮ್ಮು ಪಾಪದ ಸೊಮ್ಮು ಮದದಾ
ಬಿಮ್ಮು ಮರವೆಯು ನೆಮ್ಮು ಭವದಾ
ಹೆಮ್ಮು ಕಪಟದ ಪೆಮ್ಮು ಕೋಪದ ದಮ್ಮು ಜಗದೊಳಗೆ ॥
ಹಮ್ಮು ಶಿರಕೇ ಬೊಮ್ಮು ಬಳಕೆಯು
ದಮ್ಮು ಶಕುತಿಯು ಕಮ್ಮು ಸೊಗಸಿನ
ಸೊಮ್ಮು ಸಂತತ ಸಲಹು ಶ್ರೀ ಜಯಚಾಮರಾಜೇಂದ್ರ ॥ ೮೦ ॥

ಚತುರತೆಯು ಮೇಣ್ ನೀತಿವೈಭವ
ವತಿಹಿತದ ಕ್ಷಮದಮೆಯು ಶಾಂತಿಯು
ನುತ ಸದಾಚಾರತೆ ಧುರೀಣರು ಸುಗುಣಮತಿಯುತರು ॥
ಶ್ರುತಿನಿಕರವೇದಾಂತನಿಪುಣರು
ನುತಪುರಾಣಾಗಮರು ಮೆರೆದಿ
ಪ್ಪತುಲ ಮಹಿಸುರ ಸಲಹು ಶ್ರೀ ಜಯಚಾಮರಾಜೇಂದ್ರ ॥ ೮೧ ॥

ಕಳವು ಪಾದರಸುಳಿವಪಲ್ಲದೆ
ಪಳಿವು ನುಸುಳಟಮಾಟಮುಳಿಸು
ಮ್ಮಳಿವ ಹೊಲಗೆಲಸಗಳು ದುರ್ನುಡಿ ಸಟೆಯುಮನ್ಯಾಯ ||
ಅಳಕುಗಳು ದುರ್ದೆಸೆಯು ಸಂಕಟ
ಗಳು ಕಪಟ ಹುಸಿಯಿವನು ಧ್ವಂಸಿಪ
ಛಲಪತಿಯೆ ನೀಂ ಸಲಹು ಶ್ರೀ ಜಯಚಾಮರಾಜೇಂದ್ರ || ೯೩ ||

ಸುರುಚಿರತೆಯಾರಾಧ್ಯಕುಲದಾ
ಗುರುವರಂ ರೇಣುಕನ ವಂಶಪೆ
ಹರುಷದಿಂ ಜನಿಸುತ್ತೆ ನಾಲ್ವಡಿ ಕೃಷ್ಣನೃಪಕೃತಿಯ ||
ದೊರೆಯೆ ನಿನ್ನಯ ಶತಕವಿದನುಂ
ಸರಸ ಕವಿತೆಯೊಳೊರೆದು ನಲಿದಿಹ
ಚರನು ನಾಂ ನೆರೆ ಸಲಹು ಶ್ರೀ ಜಯಚಾಮರಾಜೇಂದ್ರ || ೯೪ ||

ಶಿವನಿಷ್ಠೆ ನಂಜುಂಡಕುವರನು
ಶಿವಕಥಾಲೀಲಾವಿನೋದನು
ಶಿವವಿಭವ ಶಿವತತ್ತ್ವ ಸದ್ಗುಣಮಾಲಭೂಷಿತನು ||
ಶಿವಶರಣಪದವನಜಭ್ರಮರನು
ಶಿವಪ್ರಮುಖ ಗುರುದೇವನೊರೆದೀ
ಭುವಿಪ ಶತಕವ ಸಲಹು ಶ್ರೀ ಜಯಚಾಮರಾಜೇಂದ್ರ || ೯೫ ||

ಜಯ ಸಕಲ ಸನ್ನುತನೆ ಜಯಜಯ
ಜಯ ಪರಮ ಕರುಣಾಳು ಜಯಜಯ
ಜಯ ಭಜಕ ಚಿಂತಾಮಣಿಯೆ ನೀ ಸರ್ವಮಯ ಜಯತು ||
ಜಯ ವಿಮಲ ಸತ್ಯಾತ್ಮ ಜಯಜಯ
ಜಯ ಸುಗುಣವಲ್ಲಭನೆ ಜಯಜಯ
ಜಯತು ಸಂತತ ಸಲಹು ಶ್ರೀ ಜಯಚಾಮರಾಜೇಂದ್ರ || ೯೬ ||

ದೇವ ಜಯಜಯ ಭಕ್ತನಿಕರವ
ಕಾವ ಜಯಜಯ ಜಂಗಮಾದಿಯ
ಜೀವ ಜಯಜಯ ಪಾವನಾಂಬಕ ಸ್ಫುರಿಪ ಸುರತರುವೆ ||
ಕೋವಿದನೆ ಜಯ ಮುಕ್ತಿಪದ ಸಂ
ಜೀವ ಜಯಜಯ ಮಹಿಷ ಮಂಡಲ
ಭಾವ ಜಯಜಯ ಸಲಹು ಶ್ರೀ ಜಯಚಾಮರಾಜೇಂದ್ರ || ೯೬ ||

ದೇವ ಜಯ ಸಕಲಾವಿ ಭಕ್ತರ
ಕಾವ ಜಯ ಕರುಣಾಳು ಸದ್ಗುಣ
ಭಾವ ಜಯ ಕುಜನತತಿಮರ್ದನ ಸರ್ವಸುಖರೂಪ ||
ಜೀವ ಜಯ ಭಜಕರ ಸುಪೋಷಕ
ಕೋವಿದನೆ ಜಯ ಮುಕ್ತಿ ಸಂಪದ
ವೀವ ಜಯಜಯ ಸಲಹು ಶ್ರೀ ಜಯಚಾಮರಾಜೇಂದ್ರ || ೯೭ ||

ಧರಣಿಪತಿ ನಿನ್ನತುಲ ಕೃಪೆಯಿಂ
ಶರಣ ಸಂತತಿ ಕೃತಿಯ ಗ್ರಥಿಸಲು
ನಿರುತ ಹವಣಿಸಿ ಪೂಜ್ಯಪಿತೃವರಕೃಷ್ಣನೃಪಕೃತಿಯ ||
ಬರೆದು ಪ್ರಭುಪಿತನೆಡೆಗೆ ಕಳುಹಿದ
ಕರಿಯುತಾ ಪ್ರಭುವಿತ್ತ ವರಫಲ
ದಿರವ ಮರೆಯೆನು ಸಲಹು ಶ್ರೀ ಜಯಚಾಮರಾಜೇಂದ್ರ || ೯೮ ||

ಇಂದು ಕುಲವರನಮಲಭಾಗ್ಯ ವ
ಸುಂಧರಾಧಿಪ ನಿನ್ನ ಸತ್ಕೃತಿ
ವೃಂದಮಂ ಬಣ್ಣಿಸಲು ಶೇಷನಿಗಸದೆನಿಸೆ ಬಳಿಕ ||
ಇಂದು ನಾ ಮಾನವನು ಪರಿಕಿಸ
ಲೊಂದನರಿಯದೆ ಗೈದ ಕೃತಿಯಿದ
ಕುಂದಿಸದೆ ನೀ ಸಲಹು ಶ್ರೀ ಜಯಚಾಮರಾಜೇಂದ್ರ || ೯೯ ||


ಮಂಗಳಂ ಚಾಮುಂಡಿಕಾಂಬೆಗೆ
ಮಂಗಳಂ ಜಯಚಾಮರಾಜಗೆ
ಮಂಗಳಂ ಮಹಿಸೂರನಾಳ್ದ ನೃಪನಿವಹಕೆಲ್ಲಂ ||
ಮಂಗಳಂ ಮಾತೃಶ್ರೀ ರಾಣಿಗೆ
ಮಂಗಳಂ ಕರ್ನಾಟಕಕೆ ಮಿಗೆ
ಮಂಗಳಂ **ಭೃಗುಕಪಿನಿಸಂಗಮನಾಥ** ಶಂಕರಗೆ || ೧೦೦ ||

|| ಚಿರಮಭಿವರ್ಧತಾಂ ಯದುಸಂತಾನಶ್ರೀಃ ||

" ವಿಜಯತೇ ಶ್ರೀ ಜಯಚಾಮರಾಜೇಂದ್ರ "

ಶಾಂತಿ|| ಶಾಂತಿ|| ಶಾಂತಿಃ||




ದಿ ಕಾರ್ಪೊರೇಷನ್ ಪ್ರೆಸ್,
ಮುನವರ್ತಪೇಟೆ,
ಬೆಂಗಳೂರು ೧೮